
# ವ್ಯಾಘ್ರ ಜಾತಕ

ಸ್ವಾಮಿ ವೀರೇಶಾನಂದ

ಭಗವಾನ್ ಬುದ್ಧನ ಉಪದೇಶಗಳನ್ನು ಒಳಗೊಂಡ, ಬೋಧಿಸತ್ವನ ವಿವಿಧ ಜನ್ಮಗಳ ವೃತ್ತಾಂತಗಳನ್ನು ನಿರೂಪಿಸುವ ಸುಂದರ ಕಥೆಗಳ ಸಂಕಲನವೇ ಪ್ರಸಿದ್ಧವಾದ 'ಜಾತಕ ಕಥೆಗಳು'. ಸಾಧಕರಿಗೆ ಹಲವು ರೀತಿಯಲ್ಲಿ ಬೋಧಪ್ರದವಾದ ಈ ಕಥೆಗಳನ್ನು ಸಂಸ್ಕೃತದಲ್ಲಿ ಆರ್ಯಶೂರನು 'ಜಾತಕಮಾಲಾ' ಎಂಬ ಕೃತಿಯಲ್ಲಿ ಬರೆದಿದ್ದು, ಅದನ್ನು ಆಧರಿಸಿ ಸರಳವಾದ ಭಾಷೆಯಲ್ಲಿ ವಿವರಿಸುವ ಹೊಸ ಸರಣಿಯೊಂದನ್ನು ಆರಂಭಿಸುತ್ತಿದ್ದೇವೆ. ಲೇಖಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಪ್ರಸ್ತುತ ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಭಗವಾನ್ ಬೋಧಿಸತ್ವನು ಎಲ್ಲ ಜೀವರಾಶಿಗಳಲ್ಲಿಯೂ ಅನುಕಂಪವನ್ನು ತೋರುವ ಕರುಣಾಳುವಾಗಿದ್ದನು. ಸ್ವಭಾವತಃ ನಿರಾಸಕ್ತಬುದ್ಧಿಯವನೂ, ಎಲ್ಲ ಜೀವಿಗಳ ಸುಖದುಃಖಗಳಲ್ಲಿ ತಾದಾತ್ಮ್ಯವನ್ನು ಹೊಂದಿದವನೂ ಆಗಿದ್ದನು. ಅವನು ಪೂರ್ವ ಜನ್ಮದಲ್ಲಿ ಮಾಡಿದ ಶ್ರೇಷ್ಠ ತ್ಯಾಗ ಮತ್ತು ನಿಸ್ವಾರ್ಥತೆಯ ಕಾರ್ಯಗಳು ಅವನ ಈ ಗುಣಗಳಿಗೆ ನಿದರ್ಶನವಾದುವು. ಅವನು ಸದ್ಗುಣಗಳ ಬಗ್ಗೆ ಗಾಢವಾದ ಅಧ್ಯಯನ ಮಾಡಿದ್ದನು. ಅವನ ಗುರುವೇ, ಈ ಎಲ್ಲ ಗುಣಗಳಿಗಾಗಿ ಮತ್ತು ಧರ್ಮಭೀರುತೆಗಾಗಿ ಅವನನ್ನು ಆರಾಧಿಸುತ್ತಿದ್ದನು.

ತನ್ನ ಹಿಂದಿನೊಂದು ಜನ್ಮದಲ್ಲಿ ತನ್ನ ಅನುಕಂಪದ ಪ್ರವಾಹದಿಂದಲೂ, ಮೃದುವಾದ ನುಡಿಗಳಿಂದಲೂ, ಜ್ಞಾನಪೂರಿತವಾದ ತನ್ನ ಮನಸ್ಸಿನಿಂದ ಕೈಗೊಂಡ ದೋಷರಹಿತ ಕಾರ್ಯಗಳಿಂದಲೂ ಬೋಧಿಸತ್ವನು ಲೋಕವನ್ನು ಅನುಗ್ರಹಿಸಿಕೊಂಡಿದ್ದನು. ತಾನು ಕೈಗೊಳ್ಳಬೇಕಾದ ಮಹತ್ಕಾರ್ಯಗಳಿಗೆ ಅನುಕೂಲವಾಗಲೆಂದು ಬ್ರಾಹ್ಮಣ ಕುಲದಲ್ಲಿ ಅವನು ಜನ್ಮವನ್ನು ಪಡೆದು ಕೊಂಡನು. ಅವನಿಗೆ ಅದೇ ರೀತಿ, ಜಾತಕರ್ಮಗಳೇ ಮುಂತಾದ ಸಂಸ್ಕಾರಗಳು ಕೂಡ ಯಥಾವತ್ತಾಗಿ ಆದವು. ಹೀಗೆ ಬೆಳೆದು ನಿಂತ ನಮ್ಮ ಪ್ರಭುವಾದ ಬೋಧಿಸತ್ವನು ಸ್ವಭಾವಯುತವಾಗಿಯೇ ಮೇಧಾಶಕ್ತಿಯನ್ನು ಹೊಂದಿದ್ದನು; ಹೀಗಾಗಿ ಅಧ್ಯಯನದಲ್ಲಿ ಚತುರನಾಗಿದ್ದನು. ಜ್ಞಾನಸಂಪಾದನೆಯಲ್ಲಿ ಅವನಿಗೆ ತೀವ್ರವಾದ ಕುತೂಹಲವಿತ್ತು. ಹೀಗಾಗಿ ಹದಿನೆಂಟು ವಿದ್ಯೆಗಳಲ್ಲಿಯೂ ಪಾರಂಗತನಾದನು. ತನ್ನ ಕುಲಕ್ಕೆ ತಕ್ಕನಾದ ಎಲ್ಲ ರೀತಿಯ ಕಲಾನೈಪುಣ್ಯಗಳಲ್ಲಿಯೂ ಚಾಕಚಕ್ಯತೆಯನ್ನು ಪಡೆದುಕೊಂಡನು. ಹೀಗೆ ತನ್ನ ಕುಲದಲ್ಲಿಯೇ ಆಚಾರ್ಯನೆಂಬ ಪದವಿಯನ್ನು ಪಡೆದುಕೊಂಡನು. ಅವನ ಗುಣಗಳನ್ನು ಏನೆಂದು ಹೊಗಳೋಣ: 'ಬ್ರಾಹ್ಮಣರಲ್ಲಿ ಬ್ರಹ್ಮವಿತ್ತನಾಗಿ, ಕ್ಷತ್ರಿಯರಲ್ಲಿ ರಾಜನಂತೆ ಅವನು ಬಹುಮಾನ್ಯನಾಗಿದ್ದನು. ಪ್ರಜೆಗಳಿಗೆ ಸಾಕ್ಷಾತ್ ಸಹಸ್ರಾಕ್ಷನಾದ ಇಂದ್ರನಂತೆ ಕಂಗೊಳಿಸುತ್ತಿದ್ದನು. ಜ್ಞಾನಾರ್ಥಿಗಳಾಗಿ ಬರುವ ವಿದ್ಯಾರ್ಥಿಗಳಿಗೆ ವಾತ್ಸಲ್ಯವನ್ನು ತೋರುವ ತಂದೆಯಂತೆ ಇದ್ದನು.'

ಹೀಗೆ ಅತಿಶಯಭಾಗ್ಯಗುಣ ಸಂಪನ್ನನಾಗಿ ಮಹಾನ್ ಸಂಪತ್ತು, ಪದವಿ ಮತ್ತು ಕೀರ್ತಿಗಳಿಗೆ ನಮ್ಮ ಪ್ರಭುವು ಭಾಜನನಾದನು. ಆದರೆ ಬೋಧಿಸತ್ವನಿಗೆ ಅವುಗಳಲ್ಲಿ ಸಂತೋಷ ಉಂಟಾಗಲಿಲ್ಲ. ಯಾವತ್ತೂ ಧರ್ಮಗ್ರಂಥಗಳ ಅಧ್ಯಯನ ಮತ್ತು ಪರಿವ್ರಾಜಕ ಜೀವನದತ್ತಲೇ ಅವನ ಮನಸ್ಸು ಸೆಳೆಯುತ್ತಿತ್ತು.

ಆ ಮಹಾತ್ಮನು ತನ್ನ ನಡವಳಿಕೆಗಳನ್ನೆಲ್ಲವನ್ನೂ ಪರಿವರ್ತಿಸಿಕೊಂಡು, ದೋಷರಹಿತನಾಗಿ ಪರಿಶುದ್ಧನಾದನು. ಗೃಹಸ್ಥ ಜೀವನವನ್ನು, ಒಂದು ವ್ಯಾಧಿಯ ರೀತಿಯಲ್ಲಿ ಒಗೆದು ತ್ಯಜಿಸಿದನು. ಒಂದು ಕಾಡಿನ ಪ್ರಸ್ಥಭೂಮಿಗೆ ನಡೆದು ಅದನ್ನು ತನ್ನ ಸಾನ್ನಿಧ್ಯದಿಂದ ಪುನೀತವನ್ನಾಗಿಸಿದನು.

ಅಲ್ಲಿ ಅವನು ಪ್ರಪಂಚದ ಸೋಂಕೂ ಇಲ್ಲದ ನಿಸ್ಸಂಗವನ್ನು ಬೆಳೆಸಿಕೊಂಡನು. ತನ್ನ ಜ್ಞಾನದ ಫಲವಾದ ಮಾನಸಿಕ ಶಾಂತಿಯನ್ನು ಪಡೆದುಕೊಂಡನು. ಪ್ರಾಪಂಚಿಕ ಜನರು ಕುಕಾರ್ಯಗಳಲ್ಲಿ ಆಸಕ್ತರಾಗಿದ್ದಾರೆ; ಹೀಗಾಗಿ ಮಾನಸಿಕ ಶಾಂತಿಯಿಂದ ವಂಚಿತರಾಗಿದ್ದಾರೆ ಎಂದು ಕಂಡುಕೊಂಡನು.

ಅವನದು ಪ್ರಶಾಂತವಾದ ಮೈತ್ರಿಯ ಭಾವ. ತನ್ನ ಪರಿಶುದ್ಧವಾದ ನಡವಳಿಕೆಯಿಂದ, ಮನೋನಿಯಂತ್ರಣದಿಂದ, ತನ್ನ ಸಂತೃಪ್ತಭಾವದಿಂದ, ಜೀವಿಗಳ ಮೇಲಿನ ತನ್ನ ಅನುಕಂಪದಿಂದ ತನ್ನ ಅಪರಿಚಿತರಿಗೂ ಕೂಡ ಅವನು ಎಲ್ಲ ಜೀವಿಗಳಿಗೂ

ಸುಹೃದನಂತೆ, ಸ್ನೇಹಿತನಂತೆ ಇದ್ದನು.

ಅವನು ಇಚ್ಛಿಸುತ್ತಿದುದು ಬಹಳ ಅಲ್ಪ. ಅವನಿಗೆ ಯಾವ ಕುಹಕಭಾವವೂ ಇರಲಿಲ್ಲ. ಅವನು ಲಾಭ, ಯಶಸ್ಸು, ಸುಃಖಗಳ ಸಂಬಂಧದಲ್ಲಿ ಎಲ್ಲ ಆಸೆಗಳನ್ನೂ ತ್ಯಾಗ ಮಾಡಿದವನು. ದೇವತೆಗಳು ಕೂಡ ಅವನ ಮೇಲೆ ಪ್ರಸನ್ನನಾಗಿದ್ದರು; ಅವನಲ್ಲಿ ಪೂಜ್ಯ ಭಾವನೆಯನ್ನು ಬೆಳೆಸಿಕೊಂಡಿದ್ದರು.

ಅವನ ತ್ಯಾಗಬುದ್ಧಿಯನ್ನು ಕಂಡಿದ್ದು ಅವನಲ್ಲಿ ಪೂಜ್ಯ ಭಾವನೆಯನ್ನು ಬೆಳೆಸಿಕೊಂಡಿದ್ದ, ಅನೇಕ ಜನರು ಅವನ ಸಂನ್ಯಾಸ ಜೀವನದ ಬಗ್ಗೆ ಕೇಳಿತಿಳಿದು ತಮ್ಮ ಗೃಹಸ್ಥಜೀವನವನ್ನು ತ್ಯಜಿಸಿ, ಅವನನ್ನೇ ಹಿಂಬಾಲಿಸಿದರು; ಅವನ ಶಿಷ್ಯರಾದರು. ತನ್ನ ಶಿಷ್ಯರಿಗೆ ಒಳ್ಳೆಯ ನಡವಳಿಕೆಯನ್ನೂ, ಇಂದ್ರಿಯಗಳ ನಿಯಂತ್ರಣವನ್ನೂ, ದಿವ್ಯಸ್ಮೃತಿಯನ್ನೂ, ಜಗತ್ತಿನ ಬಗೆಗಿನ ನಿರಾಸಕ್ತಿಯನ್ನೂ, ಮನಸ್ಸಿನ ಏಕಾಗ್ರತೆಯನ್ನೂ ಮತ್ತು ಮೈತ್ರಿಯ ಭಾವನೆಯ ಬಗ್ಗೆ ಗಾಢವಾದ ಧ್ಯಾನವನ್ನೂ ಬೋಧಿಸತ್ವನು ಚೆನ್ನಾಗಿ ಬೋಧಿಸಿದನು.

ಬೋಧಿಸತ್ವನ ಅನೇಕ ಶಿಷ್ಯರು ಅವನ ಬೋಧನೆಯ ಕಾರಣವಾಗಿ ಪರಿಪೂರ್ಣತೆಯನ್ನು ಪಡೆದುಕೊಂಡರು. ಈ ಮೂಲಕ ಅವನು ಮುಕ್ತಿಯ ಮಾರ್ಗದ ಪ್ರವರ್ತಕನಾದನು. ಅವನ ಶಿಷ್ಯರೆಲ್ಲರೂ ವೈರಾಗ್ಯದ ರಾಜಮಾರ್ಗದಲ್ಲಿ ನಡೆದು ಪುನೀತರಾದರು. ಅವರಿಗೆ ಕೆಡುಕುಗಳ ದ್ವಾರಗಳೆಲ್ಲವೂ ಬಂಧಿತವಾದವು; ಆನಂದದ ದಾರಿಗಳು ಮುಕ್ತವಾದವು.

ಒಮ್ಮೆ ಆ ಮಹಾತ್ಮನು ಪರ್ವತವೊಂದರ ಪ್ರಸ್ಥಭೂಮಿಯಲ್ಲಿ ತನ್ನ ಆಶ್ರಮವನ್ನು ಮಾಡಿಕೊಂಡನು. ಅಲ್ಲಿ ಯೋಗಮಾರ್ಗವನ್ನು ಕೈಗೊಂಡು ಧ್ಯಾನಾಭ್ಯಾಸಶೀಲನಾದನು. ಅವನ ಪುಣ್ಯಸಾನ್ನಿಧ್ಯದ ಪ್ರಯೋಜನವನ್ನು ಪಡೆದುಕೊಳ್ಳಲು ಅವನ ಶಿಷ್ಯರೂ ಅವನ ಜೊತೆಯಲ್ಲಿ ವಾಸಮಾಡಲು ಆರಂಭಿಸಿದರು.

ಒಮ್ಮೆ ಬೋಧಿಸತ್ವನು ಪರ್ವತಶ್ರೇಣಿಯಿಂದ ಕೆಳಗಿನ ಕಣಿವೆಯನ್ನು ದೃಷ್ಟಿಸುತ್ತಿದ್ದನು. ಒಂದು ಹೃದಯವಿದ್ರಾಯಕ ದೃಶ್ಯ ಅವನ ಕಣ್ಣಿಗೆ ಬಿದ್ದಿತು. ಆಗತಾನೇ ಗರ್ಭಿಣಿಯಾದ ಒಂದು ಹೆಣ್ಣುಹುಲಿಯು ಪ್ರಸವವಾಗಿ, ಒಂದು ಚಿಕ್ಕ ಮರಿ ಹುಟ್ಟಿತ್ತು. ಆದರೆ ಆಯಾಸದಿಂದ ಆ ಹೆಣ್ಣುಹುಲಿಗೆ ಸ್ವಲ್ಪ ದೂರವೂ ನಡೆಯಲಾದರ ಸಂಕಷ್ಟದ ಪರಿಸ್ಥಿತಿ ಎದುರಾಗಿತ್ತು. ಅಷ್ಟರಮೇಲೆ ತಡೆಯಲಾಗದ ಹಸಿವೆಯಿಂದ ಆ ಬಡಹೆಣ್ಣುಹುಲಿ ತತ್ತರಿಸುತ್ತಿತ್ತು. ಹತ್ತಿರದಲ್ಲಿ ಎಲ್ಲಿಯೂ ಆಹಾರವಿಲ್ಲದೆ, ಸ್ವಲ್ಪದೂರವೂ ನಡೆಯಲಾಗದೆ, ಸ್ವಲ್ಪಹೊತ್ತಿನ ಹಿಂದೆ ತಾನೇ ತಾನು ಹೆತ್ತಿದ್ದ ಆ ತನ್ನ ಶಿಶುವನ್ನೇ ಕೊಂದು ತಿನ್ನುವ ಸನ್ನಾಹದಲ್ಲಿತ್ತು. ಆ ಮಗುವಾದರೋ, ಇದಾವುದರ ಅರಿವೆಯೂ ಇಲ್ಲದೆ, ನಿರ್ಭಯವಾಗಿ, ತನ್ನ ತಾಯಿಯ ಮೇಲೆ ಪೂರ್ಣ ವಿಶ್ವಾಸವಿಟ್ಟು ತುಂಬು ಮುಗ್ಧತೆಯಿಂದ ಹಾಲು ಕುಡಿಯಲು ತಾಯಿಯ ಹತ್ತಿರವೇ ಧಾವಿಸುತ್ತಿತ್ತು. ಆದರೆ ತಾಯಿ ತನ್ನ ಮಗುವಿನ ಕಡೆಯೇ ಗುರುಗಟ್ಟಿ ನೋಡುತ್ತ, ಹೌಹಾರುತ್ತಿತ್ತು.

ಇದನ್ನು ಬೋಧಿಸತ್ವನು ನೋಡಿದನು. ಯಾವತ್ತೂ ಶಾಂತ ಭಾವದಲ್ಲಿ ಇಟ್ಟುಕೊಂಡಿದ್ದ ಅವನ ಮನಸ್ಸಿನಲ್ಲಿಯೂ ಅಶಾಂತಿಯ, ಪ್ರಕ್ಷುಬ್ಧತೆಯ ಕಾರ್ಮೋಡಗಳು ಕಾಣಿಸಿಕೊಂಡವು. ತನ್ನ ಸಹ ಜೀವಿಯೊಂದರ ಮೇಲಿನ ಅಪಾರ ಅನುಕಂಪೆಯಿಂದ ಅವನ ಮನಸ್ಸು ಪ್ರಬಲ ಭೂಕಂಪವೊಂದರಿಂದ ಮೇರು ಪರ್ವತವು ತ್ರಾಣಗೊಂಡಂತೆ ತಲ್ಲಣಿಸಿತು.

ಇದೆಂಥ ಅದ್ಭುತ! ತುಂಬು ಅನುಕಂಪವನ್ನು ಹೊಂದಿರುವ ಮಹಾತ್ಮರು ಇತರ ಎಲ್ಲ ಜೀವಿಗಳ ದುಃಖಕ್ಕೂ ಕೂಡ ಅದೆಷ್ಟು ಸಂಕಷ್ಟಪಡುತ್ತಾರೆ! ಈ ಮಹಾನ್ ಕರುಣೆಯೇ ಬೋಧಿಸತ್ವನನ್ನು ತನ್ನ ಶಿಷ್ಯನಿಗೆ ಹೀಗೆ ಉದ್ಗರಿಸುವಂತೆ ಮಾಡಿತು: ''ಪ್ರಿಯನೇ, ಪ್ರಿಯನೇ'' ಎಂದು. ''ನೋಡು ಮಗು, ಸಂಸಾರದ ಈ ಅರ್ಥಹೀನತೆಯನ್ನು! ಈ ಪ್ರಾಣಿಯು ತನ್ನ ಕಂದಮ್ಮನನ್ನೇ ತಿಂದು ಜೀವಿಸಲು ಹವಣಿಸುತ್ತಿದೆ. ಹಸಿವೆನ್ನುವುದು ಮಾತೃವಾತ್ಸಲ್ಯವನ್ನೂ ಕಡೆಗಣಿಸುವಂತೆ ಮಾಡಿಬಿಟ್ಟಿದೆ. ಅಯ್ಯೋ! ಈ ಸ್ವಾರ್ಥದ ರೌದ್ರತೆಯು ಅತಿ ಕಷ್ಟಕರವಾದುದು! ಒಬ್ಬ ತಾಯಿಯನ್ನೂ ತನ್ನ ಮಕ್ಕಳ ದೇಹವನ್ನೇ ಭೋಜನವನ್ನಾಗಿ ಮಾಡಿಸಿಬಿಡುವ ಕ್ರೌರ್ಯತೆಯಿದೆ ಅದಕ್ಕೆ. ಇಷ್ಟೊಂದು ಸ್ವಾರ್ಥ ಭಾವವನ್ನು ಬೆಳೆಸಿಕೊಳ್ಳುವುದು ಯಾರಿಗಾದರೂ ಹೇಗೆ ತಾನೇ ಸಾಧ್ಯ ವಾದೀತು? ಅದು ಇಂಥ ಘೋರಕೃತ್ಯಗಳನ್ನು ಮಾಡಲು ಜೀವಿಯನ್ನು ಪ್ರೇರೇಪಿಸುವುದಲ್ಲವೆ?''

''ಮಗೂ, ಬೇಗನೇ ಹೋಗು. ಈ ಹೆಣ್ಣು ಹುಲಿಯ ಹಸಿವನ್ನು ನಿವಾರಿಸಲು ಆಹಾರ ಪದಾರ್ಥವು ದೊರಕುವುದೇನೋ ಎಂದು ಹುಡುಕಿನೋಡು. ಇದರಿಂದ ಈ ಬಡಪ್ರಾಣಿಯು ತನ್ನ ಹಸಿವನ್ನು ನಿವಾರಿಸಿಕೊಳ್ಳಲಿ. ಹಸಿವಿನ ಬಾಧೆಯಿಂದ ಅದು ತನ್ನ ಮಗುವನ್ನು ಘಾತಿಸದಿರಲಿ. ಈ ಘೋರಕೃತ್ಯವನ್ನು ತಡೆಯಲು ನಾನೂ ಏನಾದರೂ ಉಪಾಯವನ್ನು ಮಾಡುತ್ತೇನೆ.''

ಶಿಷ್ಯನು ಗುರುವಿನ ವಾಕ್ಯವನ್ನು ಪರಿಪಾಲಿಸುತ್ತ ತೆರಳಲು ಇತ್ತ ಬೋಧಿಸತ್ವನು ಚಿಂತಿಸಿನೋಡಿದನು:

'ನಾನು ಯಾವುದೋ ಬೇರೆಯ ಜೀವಿಯ ದೇಹವನ್ನು ಈ ಹುಲಿಯ ಹಸಿವೆಗೆ ಬಲಿಯಾಗಿ ಏಕೆ ತಾನೇ ನೀಡಬೇಕು? ನನ್ನ ದೇಹವೇ ಈ ಕಾರ್ಯಕ್ಕೆ ಒದಗಿಬರುತ್ತಿದೆಯಲ್ಲವೆ? ಇದಲ್ಲದೆ ಶಿಷ್ಯನಿಗೆ ಮಾಂಸವು ಸಿಗುವುದು ಕಷ್ಟವೇ. ಅಷ್ಟುಕಾಲದವರೆಗೆ ಹೇಗೆ ತಾನೇ ಕಾಯುತ್ತಲಿರುವುದು. ಹೆಣ್ಣುಹುಲಿಯ ಹಸಿವನ್ನು ನೀಗಿಸಿ, ಅದರ ಮರಿಗಳ ಜೀವವನ್ನು ಉಳಿಸುವ ಪುಣ್ಯಕಾರ್ಯವನ್ನು ಕೈಗೊಳ್ಳುವ ಪರಮ ಅವಕಾಶವನ್ನು ನಾನು ಹೇಗೆ ತಾನೇ ಬಿಟ್ಟುಬಿಡಲಿ?

'ಈ ದೇಹವು ಸಾರಹೀನವಾದುದು. ಯಾವತ್ತೂ ಅಪವಿತ್ರ

ವಾದುದು. ದುಃಖಕ್ಕೆ ಆಶ್ರಯವಾದುದು. ಕೃತಘ್ನವಾದುದು. ಇಂಥ ದೇಹವನ್ನು ಬೇರೆಯವರೊಬ್ಬರ ಸಲುವಾಗಿ ಉಪಯೋಗಿಸಲಾರದವನು ನಿಜವಾಗಲೂ ಮೂಢನೇ ಸರಿ. ಇತರರ ದುಃಖವನ್ನು ಅಲಕ್ಷಿಸುವುದಕ್ಕೆ ಎರಡು ಕಾರಣಗಳು: ತನ್ನ ಸ್ವಂತ ಸುಖದಲ್ಲಿ ಅಪಾರವಾದ ಆಸಕ್ತಿ. ಇತರರಿಗೆ ಸಹಾಯ ಮಾಡುವ ಪ್ರವೃತ್ತಿ ಇಲ್ಲದಿರುವುದು. ಆದರೆ ಒಂದು ಜೀವಿ ಸಂಕಟಪಡುತ್ತಿರುವಾಗ ನನಗೆ ಸುಖವುಂಟಾಗುವುದಾದರೂ ಹೇಗೆ? ಹುಲಿಯ ಈ ಯಾತನೆಯನ್ನು ನಾನು ನಿರ್ಲಕ್ಷಿಸುವುದಾದರೂ ಹೇಗೆ? ಒಬ್ಬ ದುಷ್ಟಜೀವಿ ಕೂಡ ದುಃಖಪಡುತ್ತಿರುವಾಗ, ನಾನು ಸುಮ್ಮನಿರಲು ಸಾಧ್ಯವಿಲ್ಲ. ಏಕೆಂದರೆ ಅಂಥ ಜೀವಿಯು ಕಾಡಿನ ರೌರವ ಅಗ್ನಿಯು ಹುಲ್ಲು ಪೊದೆಯನ್ನು ಸುಡುವಂತೆ, ತನ್ನ ಕುಕೃತ್ಯಗಳಿಗೆ ತಾನೇ ಪರಿತಾಪ ಪಡುತ್ತಿರುತ್ತಾನೆ.

'ಹೀಗಾಗಿ ನನ್ನ ಈ ವ್ಯರ್ಥ ಸಾರಹೀನ ದೇಹವನ್ನು ಪರ್ವತ ಪ್ರಪಾತದಲ್ಲಿ ಬೀಳಿಸಿಬಿಡುತ್ತೇನೆ. ಅದು ಅಲ್ಲಿ ಹೆಣವಾಗಿ ಬಿದ್ದು ಬಿಡುತ್ತದೆ. ಹಸಿದು ಕಂಗಾಲಾಗಿರುವ ಈ ಹೆಣ್ಣುಹುಲಿಯ ಇಂದಿನ ಭೋಜನವಾಗುತ್ತದೆ. ಇದರಿಂದ ಅದರ ಮರಿಗಳ ಜೀವವೂ ಉಳಿಯುತ್ತದೆ.

'ಇದಲ್ಲದೆ ಹೀಗೆ ಮಾಡುವುದರಿಂದ, ಜಗತ್ತಿನ ಸೇವೆ ಮಾಡುವ ಸಾಧುಜನರಿಗೆ ಒಂದು ಒಳ್ಳೆಯ ದೃಷ್ಟಾಂತವನ್ನು ನಾನು ಒದಗಿಸಿದ ಹಾಗೆ ಆಗುತ್ತದೆ. ದುರ್ಬಲರನ್ನು ಉತ್ತೇಜಿಸಿದ ಹಾಗೆ ಆಗುತ್ತದೆ. ದಾನ ಮಾಡುವವರನ್ನು ಕಂಡರೆ ಸಂತೋಷಿಸಿದ ಹಾಗೆ ಆಗುತ್ತದೆ. ಸದ್ಗುಣಿಗಳನ್ನು ಪ್ರೋತ್ಸಾಹಿಸಿದ ಹಾಗೆ ಆಗುತ್ತದೆ. ಇದಲ್ಲದೆ ಸ್ವಾರ್ಥವೆಂಬ ರಾಕ್ಷಸನಿಗೆ ನಿರಾಶೆ ಯನ್ನು ಉಂಟುಮಾಡಿದಂತೆಯೂ ಆಗುತ್ತದೆ. ಬುದ್ಧನಿಗೆ ಇರ ಬೇಕಾದ ಮಹಾನ್‌ಗುಣಗಳನ್ನು ನೋಡಿ ಹರ್ಷಗೊಂಡಂತೆ ಯೂ ಇರುತ್ತದೆ. ಸ್ವಾರ್ಥ ಮತ್ತು ಅಹಂಕಾರಗಳಿಂದ ಬೀಗು ತ್ತಿರುವ ಜನರನ್ನು ಸಮರ್ಥವಾಗಿ ಎದುರಿಸಿದ ಹಾಗೆಯೂ ಆಗುತ್ತದೆ.

'ಇದರಿಂದ ಶ್ರದ್ಧಾಳುಗಳಿಗೆ ಅವರ ಶ್ರದ್ಧೆಯ ಕೇಂದ್ರ ನಾನಾಗುತ್ತೇನೆ; ದಾನಶೀಲರನ್ನು ಕಂಡು ಹೀಗಳೆಯುವವರು ಆಶ್ಚರ್ಯದಿಂದ ನೋಡುವ ಅದ್ಭುತಪುರುಷನೂ ನಾನಾಗುತ್ತೇನೆ. ನಿಸ್ವಾರ್ಥ ಹಾಗೂ ಪರೋಪಕಾರ ಜೀವನವನ್ನು ನಡೆಸುವ ಸಾಧುಜೀವಿಗಳಿಗೆ ಆದರ್ಶಪುರುಷನೂ ನಾನಾಗುತ್ತೇನೆ. ಪೂರ್ಣ ಜ್ಞಾನವನ್ನು ಪಡೆದು ಬುದ್ಧನಾಗುವ ನನ್ನ ಮಹಾನ್ ಪ್ರಯತ್ನದಲ್ಲಿ ಇದೊಂದು ಮೈಲುಗಲ್ಲಾಗುತ್ತದೆ.

'ಈ ನನ್ನ ನಿರ್ಧಾರದ ಹಿಂದೆ ಯಾವ ಅಹಂಕಾರವಾಗಲಿ, ಮಹತ್ವಾಕಾಂಕ್ಷೆಯಾಗಲಿ ಇಲ್ಲವೇ ಇಲ್ಲ. ರಾಜಭೋಗದ ಆಸೆಯಾಗಲಿ, ಸ್ವರ್ಗಸುಖದ ಬಯಕೆಯಾಗಲಿ ಖಂಡಿತವಾಗಿಯೂ ಇಲ್ಲ. ಈ ನನ್ನ ಕೃತ್ಯದಿಂದ ಅತ್ಯಂತ ಶ್ರೇಷ್ಠವಾದ, ನಿರಂತರವಾದ ಆನಂದವನ್ನೂ ನನಗಾಗಿ ನಾನು ಆಶಿಸುವುದಿಲ್ಲ. ನನ್ನ ಇಚ್ಛೆ ಒಂದೇ. ಸೂರ್ಯದೇವನು ಕತ್ತಲೆಯನ್ನು ತೊಲಗಿಸಿ, ಬೆಳಕನ್ನು ಎಲ್ಲ ಕಡೆ ಪಸರಿಸುವಂತೆ, ಜಗತ್ತಿನ ಎಲ್ಲ ಜೀವಿಗಳ ದುಃಖವನ್ನೂ ನಿರ್ಮೂಲನೆ ಮಾಡಿ, ಅವರೆಲ್ಲರೂ ಆನಂದ ಮತ್ತು ಶಾಂತಿಗಳಿಂದ ಜೀವಿಸುವಂತೆ ಮಾಡುವ ಸಾಮರ್ಥ್ಯವು ನನ್ನದಾಗಲಿ ಎನ್ನುವುದೊಂದೇ ನನ್ನ ಬಯಕೆ.

'ಜನರು ನನ್ನನ್ನು ತಮ್ಮ ಸ್ಮರಣೆಯಲ್ಲಿ ಇಟ್ಟುಕೊಳ್ಳಲಿ, ಇಲ್ಲವೇ ಬಿಡಲಿ. ಪರೋಪಕಾರದ ಸದ್ಗುಣವನ್ನು ಅವರು ಅಭ್ಯಾಸ ಮಾಡಲಿ, ಇಲ್ಲವೇ ಮಾಡದಿರಲಿ ಎಲ್ಲ ಬಗೆಯಲ್ಲಿಯೂ ನಾನು ಜಗತ್ತಿನ ಕ್ಷೇಮಕ್ಕಾಗಿ, ಇಲ್ಲಿನ ಜನರ ಸುಖಕ್ಕಾಗಿಯೇ ನನ್ನ ಈ ಬದುಕು ಮುಡಿಪಾಗಿರಲಿ ಎನ್ನುವುದೇ ನನ್ನ ಅಂತಿಮ ಬಯಕೆ.'

ಹೀಗೆಂದು ಬೋಧಿಸತ್ವನು ಚಿಂತಿಸಿದನು. ತನ್ನ ಸಚ್ಚಿಂತನೆಯಲ್ಲಿಯೇ ಆನಂದವನ್ನೂ ಹೊಂದಿದನು. ದೇವತೆಗಳೂ ಅಚ್ಚರಿಪಡುವಂಥ ತ್ಯಾಗಕಾರ್ಯಕ್ಕಾಗಿ ಸನ್ನದ್ಧನಾದನು. ಪರ್ವತ ಶಿಖರದಿಂದ ಅವನ ಶರೀರವು ಬಿದ್ದಿತು. ಅವನು ದೇಹತ್ಯಾಗ ಮಾಡಿದನು.

ಬಹು ಎತ್ತರದಿಂದ ಕೆಳಕ್ಕೆ ಬಿದ್ದ ಬೋಧಿಸತ್ವನ ಶರೀರದ ಸದ್ದು ಹಸಿದಿದ್ದ ಆ ಹೆಣ್ಣು ಹುಲಿಯ ಕಿವಿಗೆ ಬಿತ್ತು. ಕಾತರದಿಂದ ಹಾಗೂ ಕ್ರೋಧದಿಂದ ಅದು ಅತ್ತಿತ್ತ ನೋಡಿತು. ತನ್ನದೇ ಆದ ಕಂದಮ್ಮಗಳ ಮಾರಣಹತ್ಯೆಯ ಪ್ರಯತ್ನದಿಂದ ಅದು ಹಿಂದೆಗೆಯಿತು. ಆ ಹೆಣ್ಣುಹುಲಿ ಕಲೇವರದತ್ತ ಧಾವಿಸಿತು. ಬೋಧಿಸತ್ವನ ನಿರ್ಜೀವ ದೇಹವನ್ನು ನೋಡಿತು. ಧಾವಿಸಿಬಂದು, ಆ ದೇಹ ದತ್ತ ಎಗರಿತು. ತನ್ನ ಹಲ್ಲುಗಳಿಂದ ಅದನ್ನು ಚಿಂದಿಚಿಂದಿಯಾಗಿ ಮಾಡಿತು.

ಇತ್ತ ಶಿಷ್ಯನು ಮರಳಿಬಂದನು. ಅವನಿಗೆ ಹುಲಿಗೆ ಕೊಡಬೇಕಾದ ಮಾಂಸ ಸಿಕ್ಕಿರಲಿಲ್ಲ. ಬಂದು ನೋಡಿದರೆ, ಗುರುವಾದ ಮಹಾತ್ಮ ಬೋಧಿಸತ್ವನೂ ಅಲ್ಲಿ ಕಾಣಲಿಲ್ಲ. ಅವನು ಸುತ್ತಲೂ ನೋಡಿದನು. ಪರ್ವತಕಣಿವೆಯ ಪ್ರಪಾತದಲ್ಲಿ ಬೋಧಿಸತ್ವನ ನಿರ್ಜೀವ ದೇಹವನ್ನು ಆ ಹೆಣ್ಣು ಹುಲಿಯು ಆಸ್ವಾದಿಸುತ್ತಿರುವುದನ್ನು ಕಂಡನು. ತನ್ನ ಮನಸ್ಸಿನಲ್ಲಿ ಹೊಯ್ದಾಡುತ್ತಿರುವ ದುಃಖ ಮತ್ತು ನೋವಿನ ಭಾವನೆಗಳನ್ನು ಹತ್ತಿಕ್ಕಿಕೊಂಡು, ಭಗವಂತನಾದ ಬೋಧಿಸತ್ವನ ಸ್ತುತಿಯನ್ನು ಮಾಡಿದನು.

ಇದರಲ್ಲಿ ದೇವತೆಗಳೂ ಒಂದುಗೂಡಿದರು. ಗಂಧರ್ವರು, ಯಕ್ಷರು, ದೇವತೆಗಳು ಇವರೆಲ್ಲರೂ ಬೋಧಿಸತ್ವನ ಈ ಅಪಾರ ತ್ಯಾಗವನ್ನು ಕೊಂಡಾಡಿದರು. ಆ ಹೆಣ್ಣುಹುಲಿಯು ತಿಂದು ಬಿಟ್ಟು ಉಳಿಸಿದ್ದ ಮೂಳೆಯ ಹಂದರವಾಗಿದ್ದನು ಬೋಧಿಸತ್ವನು. ಆ ಮೂಳೆಗಳೇ ನಿಜವಾದ ಅರ್ಥದಲ್ಲಿ ಅಮೂಲ್ಯವಾದ ಪುಣ್ಯವಸ್ತುವಾಗಿತ್ತು. ದೇವತೆಗಳೆಲ್ಲರೂ ಆ ಮೂಳೆಯ ಹಂದರವನ್ನು ಹೂವಿನ ರಾಶಿಯಿಂದ, ಬೆಲೆಬಾಳುವ ವಸ್ತ್ರಗಳಿಂದ, ವಜ್ರವೈಢೂರ್ಯಗಳಿಂದ ಮುಚ್ಚಿಬಿಟ್ಟರು; ಗಂಧವನ್ನು ಲೇಪಿಸಿ